ಮನಿಯಾಳನ ಜೊತೆ ಆಶಾ ಕಾರ್ಯಕರ್ತೆ ಎಂಬ ಕೆಲಸವನ್ನ ನೆಚ್ಚಿಕೊಂಡು ಸಂಸಾರ ಸಾಗಿಸುತ್ತಿರುವ ಜಯಮ್ಮ ಈ ಡೇಂಗ್ಯು ಜ್ವರದ ಪ್ರಯುಕ್ತ ಮ್ಯಾಗಳ ಕೇರಿಯಲ್ಲಿ ಸರ್ವೆ ಮಾಡುತ್ತಿರುವಾಗ. ಮಲ್ಲಣ್ಣನ ಹಟ್ಟಿ ಬಯಲಿನ ಪಕ್ಕಕ್ಕಂಟಿಕೊಂಡಿರುವ ತಗ್ಗಿನೊಳಗೆ ಚರಂಡಿಯ ನೀರುನಿಂತು ಗಲೀಜು ಜಾಸ್ತಿ ಇರೋದನ್ನ ನೋಡುತಾ ನಿಂತಿದ್ಲು. ಏನುಡುಗಿ ಜಯಮ್ಮ ಏನೋ ಹುಡುಕುತಾ ಇದ್ದೀಯಾ? ಎಂದ ಮಲ್ಲಣ್ಣನೆಣುತಿಯ ಮಾತಿಗೆ, ‘ಯಕ ಮನೆ ಮುಂದೆ ನೀರನ ಇಂಗೆ ನಿಲ್ಲಸಕಳಬ್ಯಾಡಿ, ಸೊಳ್ಳೆ ಮೊಟ್ಟೆಯಿಕ್ಕಿ ಮರಿಮಾಡತಾ ಇದಾವೆ. ಇವುಗಳನ್ನೆ ಕಣಕ್ಕ ಲಾರ್ವ ಉಳ ಅಂಬೋದು. ಇಂತ ಸಣ್ಣ ಹಗಲು ಸೊಳ್ಳೆ ಕಚ್ಚೀರೆ ಡೇಂಗ್ಯೂ ಜ್ವರ ಬರ್ತಾ ಅವ್ವೆ. ಅಂಗಾಗೆ ಕಣಕೊ ಆ ಮೂಲೆಮನೆ ರಂಗಯ್ಯನೆಂಡ್ರುಗು ಅವೇಜ್ವರ. ಆ ಬೆಟ್ಟದಸಿದ್ದಪ್ಪನ ಮಗನಿಗು ಅವೇ ಜ್ವರ, ಇಲ್ಲಿ ನಿಮ್ಮನೆ ಹಿಂದೆ ಗುಡ್ಡೀರನ ಅಮ್ಮುಂಗು ನೆನ್ನೆ ಇವೇ ಜ್ವರವೆಂದು ಪತ್ತೆಯಾಗೈತೆ, ಅದಿಕ್ಕೆ ಹೇಳೋದು ಇಂಗೆ ಮನೆ ಮುಂದೆ ನೀರು ನಿಲ್ಲದಂಗೆ ನೋಡ್ ಕಳಕ. ಇಂಗೆ ನಿಂತ ನೀರಿನಿಂದಾನೆ ಮನುಷ್ಯರಿಗೆ ಜ್ವರ ಬರತಾ ಇರೋದು’ ಎಂದು ಆಶಾ ಕಾರ್ಯಕರ್ತೆ ಜಯಮ್ಮ ಸಣ್ಣಧ್ವನಿಯ ಗಟ್ಟಿ ಮಾತಿನಿಂದ ಬುದ್ಧಿ ಹೇಳುವ ಉಮೇದಿನಲ್ಲಿ ತನ್ನೆರೆಡು ಕಣ್ಣುಗಳನ್ನ ಪಿಳುಕಿಸಿಕೊಂಡು ಮೆದುವಾಗಿ ಮಾತಾಡುತ್ತಿದ್ದಳು. ಆಗಿನ್ನ ಉಂಡ ತಟ್ಟೆ ತೊಳಿಯಾಕಂತ ಈಚೆ ಬಂದಿದ್ದ

